ಓ ಎಸ್ ನಂಃ 399/2021

**ಪಿ. ಡಬ್ಲ್ಯೂ ಃ 1**

**ದಿಃ 08.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಆರ್ ಎಸ್ ವಕೀಲರಿಂದ**

ನಾನು ಮತ್ತು ನನ್ನ ತಂಗಿ ಹುಟ್ಟಿದಾಗಿನಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. 2 ನೆ ವಾದಿ ವೀಣಾ ರವರಿಗೆ 2008-09 ರಲ್ಲಿ ಮದುವೆ ಆಗಿದೆ. ಅವರು ಯಲಹಂಕದ ನ್ಯೂ ಟೌನ್ ನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿ 1 ರಿಂದ 3 ರವರು ಖಾಯಂ ಆಗಿ ಯಾಗನಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿ 5 ರಿಂದ 7 ರವರು ಮದುವೆಗೆ ಮೊದಲು ಯಾಗನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಮದುವೆಯಾದ ನಂತರ ಎಲ್ಲಿ ವಾಸವಾಗಿದ್ದಾರೆ ಎಂದು ಗೊತ್ತಿಲ್ಲ. ದಾವೆ ಹಾಕಲು ನಾನು ಒಬ್ಬನೇ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ ನಮ್ಮ ಕುಟುಂಬದ ಮೂಲಪುರಷ ದೊಡ್ಡಬೈರ ಮತ್ತು ಅವರ ಹೆಂಡತಿ ಪುಟ್ಟನರಸಮ್ಮ ಇವರನ್ನು ನಾನು ನೋಡಿಲ್ಲ. ಅವರು ತೀರಿಕೊಂಡು ಸುಮಾರು 50 ರಿಂದ 60 ವರ್ಷವಾಗಿರಬಹುದು. ನಾನು ಅವರನ್ನು ನೋಡಿರುವುದಿಲ್ಲ. ದಾವಾ ಸ್ವತ್ತುಗಳು ನಮ್ಮ ತಂದೆಯ ಕುಟುಂಬದ ಸ್ವತ್ತುಗಳಲ್ಲ ಎಂದರೆ ಸರಿ. ನಮ್ಮ ತಾಯಿ ಕಡೆಯಿಂದ ಬಂದ ಸ್ವತ್ತುಗಳಾಗಿರುತ್ತವೆ ಎಂದು ಸಾಕ್ಷಿ ಹೇಳುತ್ತಾರೆ.

ನಾನು ಬಿ.ಇ ಮುಗಿಸಿದ್ದೇನೆ. ನಾನು ಸ್ವಂತ ಉದ್ಯೋಗ ಮಾಡುತ್ತಿದ್ದೇನೆ. ದೊಡ್ಡಬೈರಯ್ಯ ಇವರಿಗೆ ಚಿಕ್ಕಣ್ಣ ಎಂಬ ಒಬ್ಬ ಮಗನಿದ್ದನು. ನಾನು ಚಿಕ್ಕಣ್ಣ ಇವರನ್ನು ನೋಡಿಲ್ಲ. ದಾವಾ ಸ್ವತ್ತುಗಳನ್ನು ಚಿಕ್ಕಣ್ಣ ವ್ಯವಸಾಯ ಮಾಡುತ್ತಿದ್ದದ್ದನ್ನು ನಾನು ನೋಡಿಲ್ಲ. ದಾವಾ ಸ್ವತ್ತಿನ ಕಂದಾಯ ದಾಖಲೆಗಳು ಮೂಲತಃ ಪುಟ್ಟನರಸಮ್ಮ ಕೋಂ ದೊಡ್ಡಬೈರ ಇವರ ಹೆಸರಿನಲ್ಲಿದ್ದವು. ಸ.ನಂ. 40 ಇದು ಒಟ್ಟು 11 ಎಕರೆ 22 ಗುಂಟೆ ಇತ್ತು ಎಂದರೆ ಸರಿ. ಅದು ಸರ್ಕಾರಿ ಪಡವಾಗಿತ್ತು ಎಂದರೆ ಸರಿ. ಸುಮಾರು ವರ್ಷಗಳ ಕಾಲ ದಾವಾ ಸ್ವತ್ತು ಪಡ ಇತ್ತು, ಆದ್ದರಿಂದ ನಮ್ಮ ಕುಟುಂಬದವರ ಹೆಸರು ಬಂದಿರಲಿಲ್ಲ ಎಂದರೆ ಸರಿ. 1 ನೆ ಪ್ರತಿವಾದಿಯು ಪಡ ರಿಸ್ಟೋರ್ ಮಾಡಲು ಅರ್ಜಿ ಕೊಟ್ಟು ಪಡ ರಿಸ್ಟೋರ್ ಆದ ನಂತರ ಅವರ ಹೆಸರಿನಲ್ಲಿ ಖಾತೆ ಮಾಡಿಸಿಕೊಂಡಿದ್ದಾರೆ

ಎಂದರೆ ಸರಿಯಲ್ಲ. ನಮ್ಮ ತಾಯಿ 1 ನೆ ಪ್ರತಿವಾದಿಯ ಅಣ್ಣನಾಗಬೇಕಾಗಿದ್ದರಿಂದ ಅವರಿಗೆ ಹಣ ಕೊಟ್ಟು ಪಡ ರಿಸ್ಟೋರ್ ಮಾಡಿಸಿಕೊಳ್ಳಲು ಹೇಳಿದ್ದರು ಎಂದು ಸಾಕ್ಷಿ ಹೇಳುತ್ತಾರೆ.

ನಮ್ಮ ತಾಯಿ 1ನೆ ಪ್ರತಿವಾದಿಗೆ ಹಣ ಕೊಟ್ಟ ಬಗ್ಗೆ  ನಾವು ಯಾವುದೆ ದಾಖಲೆ ಬರೆಯಿಸಿಕೊಂಡಿಲ್ಲ. ಚಿಕ್ಕಣ್ಣ ಇವರಿಗೆ ಲಿಂಗಣ್ಣ ಅಲಿಯಾಸ್ ಲಿಂಗಪ್ಪ ಮತ್ತು ಚಿಕ್ಕಣ್ಣ ಅಲಿಯಾಸ್ ಚಿಕ್ಕಯ್ಯ ಇರುತ್ತಾರೆ. ಚಿಕ್ಕಣ್ಣ ಇವರ ಇಬ್ಬರು ಮಕ್ಕಳು ಈಗ ಜೀವಂತವಾಗಿರುವುದಿಲ್ಲ. ಸ.ನಂ. 41 ರ ದಾಖಲೆಗಳು ಯಾವುದೆ ಕಾಲಕ್ಕೂ ದೊಡ್ಡಬೈರ ಅಥವಾ ಪುಟ್ಟ ನರಸಮ್ಮ ಇವರ ಹೆಸರಿನಲ್ಲಿ ಇದ್ದವು ಎಂದು ನಮ್ಮ ತಾಯಿ ಹೇಳುತ್ತಿದ್ದರು ಆದರೆ ನಮಗೆ ಯಾವುದೆ ದಾಖಲೆ ಸಿಕ್ಕಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಲಿಂಗಣ್ಣ ಅಲಿಯಾಸ್ ಲಿಂಗಯ್ಯ ಇವರಿಗೆ 3 ಜನ ಮಕ್ಕಳು ಅವರೆಂದರೆ ಚಿಕ್ಕಬೈರಪ್ಪ ಸಿದ್ದಮ್ಮ ಮತ್ತು ಗಂಗಮ್ಮ ಇರುತ್ತಾರೆ. ಗಂಗಮ್ಮ ಜೀವಂತ ಇರುವುದಿಲ್ಲ.  ಪ್ರತಿವಾದಿ 3, 8 ರಿಂದ 13 ರವರು ಲಿಂಗಪ್ಪ ಇವರ ವಾರಸುದಾರರು ಎಂದರೆ ಸರಿ.  7 ನೆ ಪ್ರತಿವಾದಿ ಸಿದ್ದಮ್ಮ ಜೀವಂತವಾಗಿದ್ದಾರೆ. ಅವರು ಲಿಂಗಪ್ಪ ಇವರ 2ನೆ ಮಗಳು ಎಂದರೆ ಸರಿ.  ಪ್ರತಿವಾದಿ 7 ರಿಂದ 13 ಮತ್ತು 3 ರವರು 1ನೆ ಪ್ರತಿವಾದಿಗೆ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಣ್ಣ ಬಿನ್ ಚಿಕ್ಕಣ್ಣ ಇವರಿಗೆ ಇಬ್ಬರು ಗಂಡು ಮಕ್ಕಳಿರುತ್ತಾರೆ ಎಂದರೆ ಸರಿ. ಅವರ ಹೆಸರು ಚಿಕ್ಕಮ್ಮ ಮತ್ತು  ಜಯಮ್ಮ ಎಂದರೆ ಸರಿ.  ಜಯಮ್ಮನ ವಾರಸುದಾರರು ವಾದಿಗಳಾದ ನಾವು ಎಂದರೆ ಸರಿ.  ಚಿಕ್ಕಣ್ಣ ಬಿನ್ ಚಿಕ್ಕಣ್ಣ ಇವರ ಹೆಸರಿನಲ್ಲಿ ದಾವಾ ಸ್ವತ್ತುಗಳ ದಾಖಲೆಗಳು ಇರಲಿಲ್ಲ.  ಸ್ವತ್ತು 1ನೆ ಪ್ರತಿವಾದಿಯ ತಂದೆ ಲಿಂಗಣ್ಣ ಇವರು ದೊಡ್ಡವರಾಗಿದ್ದರಿಂದ ಅವರ ಹೆಸರಿನಲ್ಲಿತ್ತು ಎಂದು ನಮ್ಮ ತಾಯಿ ಹೇಳುತ್ತಿದ್ದರು.

1ನೆ ಪ್ರತಿವಾದಿ ಮತ್ತು ಚಿಕ್ಕಣ್ಣ ಇವರ ಇಬ್ಬರು ಹೆಣ್ಣುಮಕ್ಕಳಾದ ಚಿಕ್ಕಮ್ಮ ಮ್ತು ಜಯಮ್ಮ ಇವರು ದಿನಾಂಕಃ 29.10.2009 ರಲ್ಲಿ ಪಂಚಾಯಿತಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ವಿಭಾಗಪತ್ರದ ಪ್ರಕಾರ ಸ.ನಂ. 40 ರಲ್ಲಿ 6 ಎಕರೆ 9 ಗುಂಟೆ ಸ್ವತ್ತು 1ನೆ ಪ್ರತಿವಾದಿಗೆ ಬಂದಿತ್ತು ಎಂದರೆ ಸರಿಯಲ್ಲ.  ಉಳಿದ 5 ಎಕರೆ 8 ಗುಂಟೆಯನ್ನು ಜಯಮ್ಮ ಮತ್ತು ಚಿಕ್ಕಮ್ಮ ಇವರಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ.

ಸ.ನಂ. 41/1 ರಲ್ಲಿ 5 ಎಕರೆ 11 ಗುಂಟೆಯನ್ನು 1ನೆ ಪ್ರತಿವಾದಿಯ ಭಾಗಕ್ಕೂ ಉಳಿದ 4 ಎಕರೆ 11 ಗುಂಟೆ ನಮ್ಮ ತಾಯಿ ಚಿಕ್ಕಮ್ಮ ಮತ್ತು ಜಯಮ್ಮ ಇವರಿಗೆ ಕೊಟ್ಟಿದ್ದರು. ಎಂದರೆ ಸರಿಯಲ್ಲ. ಆ ಪ್ರಕಾರ 2009 ರಿಂದ ಪ್ರತ್ಯೇಕ ಸ್ವಾಧೀನ ಹೊಂದ್ದಿರು ಎಂದರೆ ಸರಿಯ ಲ್ಲ.  ಜಯಮ್ಮ ಇವರು 21.02.2012 ರಲ್ಲಿ ತೀರಿಕೊಂಡಿದ್ದಾರೆ. ನಾವು 1ನೆ ಪ್ರತಿವಾದಿಗೆ ಪ್ರತಿ 15 ದಿವಸಗೊಮ್ಮೆ ಭಾಗ ಬೇಕೆಂದು ಕೇಳುತ್ತಿದ್ದೇವು.

2019 ರಿಂದ ನಮ್ಮ ಮತ್ತು ಪ್ರತಿವಾದಿಗಳ ಮಧ್ಯೆ ಒಟ್ಟು ಕುಟುಂಬ ಅಸ್ತಿತ್ವದಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ರಾಜಯ್ಯ ಈ ದಿನ ಕೋರ್ಟ್ ನಲ್ಲಿ ಕುಳಿತಿದ್ದಾರೆ ಎಂದರೆ ಸರಿ. ನಮ್ಮ ತಾಯಿ ತನ್ನ ಭಾಗಕ್ಕೆ ಬಂದ ಸ್ವತ್ತುಗಳನ್ನು ಕಂದಾಯ ದಾಖಲೆ ಮಾಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಮತ್ತು ನಮ್ಮ ಚಿಕ್ಕಮ್ಮ ಇವರು ತಮ್ಮ ಭಾಗಕ್ಕೆ ಬಂದ ಸ್ವತ್ತನ್ನು ದಿನಾಂಕ ಃ 16.01.2021 ರಂದು ಎರಡು ಬೇರೆ ಬೇರೆ ಕ್ರಯಪತ್ರಗಳ ಮೂಲಕ ರಾಘವೇಂದ್ರ ಮತ್ತು ಭಾನುಮತಿ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಕಂದಾಯ ದಾಖಲೆಗಳು 1 ನೆ ಪ್ರತಿವಾದಿಯ ಹೆಸರಿನಲ್ಲಿ ಇದ್ದುದ್ದರಿಂದ 1 ನೆ ಪ್ರತಿವಾದಿ ಮತ್ತು ಅವರ ಕುಟುಂಬದ ಸದಸ್ಯರು ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆದರೆ ಒಟ್ಟು ಕುಟುಂಬದಲ್ಲಿದ್ದ ಆಸ್ತಿಯನ್ನು ಎಲ್ಲರೂ ಸೇರಿ ರಾಘವೇಂದ್ರ ಮತ್ತು ಭಾನುಮತಿ ಇವರಿಗೆ ಮಾರಾಟ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಕ್ರಯಕ್ಕೆ ತೆಗೆದುಕೊಂಡವರು ಖಾತೆ 1 ನೆ ಪ್ರತಿವಾದಿಯ ಹೆಸರಿನಲ್ಲಿ ಇದ್ದುದ್ದರಿಂದ ಪ್ರತಿಫಲವನ್ನು ಚೆಕ್ ಮೂಲಕ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಕೊಟ್ಟಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಕ್ರಯದಿಂದ ಬಂದ ಸಂಪೂರ್ಣ ಹಣವನ್ನು 1 ನೆ ಪ್ರತಿವಾದಿಯು ನನ್ನ, ವೀಣಾ ಹಾಗೂ ಚಿಕ್ಕಮ್ಮ ಇವರ ಖಾತೆಗಳಿಗೆ ಆರ್ ಟಿ ಜಿ ಎಸ್ ಮೂಲಕ ವರ್ಗಾವಣೆ ಮಾಡಿದ್ದಾರೆಂದರೆ ಸಾಕ್ಷಿ ಸಂಪೂರ್ಣ ಹಣ ಮಾಡಿಲ್ಲ ಎಂದು ಹೇಳುತ್ತಾರೆ, ಎರಡು ಕ್ರಯಪತ್ರಗಳ ಮೂಲಕ ಬಂದ ಒಟ್ಟು ಹಣ ಎಷ್ಟು ಎಂದು ನನಗೆ ಗೊತ್ತಿಲ್ಲ.

ಕ್ರಯಪತ್ರದ ದೃಢೀಕೃತ ಪ್ರತಿಗಳನ್ನು ನಾನೇ ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿ. ಆ ಎರಡು ಪತ್ರಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಅದಕ್ಕೆ ವೀಣಾ ಮತ್ತು ಚಿಕ್ಕಮ್ಮ ಇವರು ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ನೆ ವಾದಿಯ ಬಗ್ಗೆ ನನಗೆ ಏನು ಗೊತ್ತಿಲ್ಲ. ಆ ಕ್ರಯಪತ್ರಗಳಲ್ಲಿ ನಮ್ಮ ತಂಗಿ ಮತ್ತು ಚಿಕ್ಕಮ್ಮ ರ

ಫೋಟೋಗಳು ಮತ್ತು ಸಹಿಗಳು ಇವೆ ಎಂದರೆ ಸರಿ. ನಾನು ಪತ್ರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆಂದರೆ ಸರಿ. ವೀಣಾ ಸಹ ಪದವೀಧರೆ ಇರುತ್ತಾರೆ ಎಂದರೆ ಸರಿ. ನಾನು ವೀಣಾ ಇವರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ. ಕ್ರಯಪತ್ರಗಳನ್ನು ಬರೆದುಕೊಟ್ಟ ವಿಷಯಗಳನ್ನು ವಾದಪತ್ರದಲ್ಲಿ ಬರೆಯಿಸಿದ್ದೇವೋ ಇಲ್ಲವೋ ನೆನಪಿಲ್ಲ. ಆ ಕ್ರಯಪತ್ರಗಳಿಗೆ 16 ನೆ ಪ್ರತಿವಾದಿಯ ಮಕ್ಕಳು ಸಹ ರುಜು ಮಾಡಿದ್ದಾರೆ ಎಂದರೆ ಸರಿ. 16 ನೆ ಪ್ರತಿವಾದಿಯ ಮಕ್ಕಳನ್ನು ಈ ಕೇಸ್ ನಲ್ಲಿ ಪಾರ್ಟಿ ಮಾಡಿಲ್ಲ. 1 ನೆ ಪ್ರತಿವಾದಿ ಏನು ಪ್ರತಿವಾದಪತ್ರ ಸಲ್ಲಿಸಿದ್ದಾರೆಂದು ಓದಿ ತಿಳಿದುಕೊಂಡಿದ್ದೇನೆ.

ದಿನಾಂಕ ಃ 8.10.2021 ರಂದು ರಾಘವೇಂದ್ರ ಮತ್ತು ಭಾನುಮತಿ ಇವರ ಪರವಾಗಿ

ಕರಾರುಪತ್ರಗಳು ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಕರಾರುಪತ್ರ ಆದ ನಂತರ 1ನೆ ಪ್ರತಿವಾದಿಯು 26 ಲಕ್ಷಗಳನ್ನು ಆರ್ ಟಿ ಜಿ ಎಸ್ ಮೂಲಕ ನನ್ನ ಖಾತೆಗೆ ಹಣ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿ. ದಿನಾಂಕ ಃ 8.01.2021 ರಂದು 5 ಲಕ್ಷಗಳನ್ನು ಆರ್ ಟಿ ಜಿ ಎಸ್ ಮೂಲಕ 1ನೆ ಪ್ರತಿವಾದಿ ನನ್ನ ಖಾತೆಗೆ ವರ್ಗಾವಣೆ ಮಾಡಿದ್ದರು ಎಂದರೆ ಸರಿ. ಕ್ರಯಪತ್ರವಾಗುವ ಮೊದಲು 2ನೆ ವಾದಿಗೆ ರೂ 25 ಲಕ್ಷ ಆರ್ ಟಿ ಜಿ ಎಸ್ ಮೂಲಕ 1ನೆ ಪ್ರತಿವಾದಿ ಕೊಟ್ಟಿದ್ದಾರೆ ಎಂದರೆ ಸರಿ. ಕ್ರಯಪತ್ರ ಬರೆದುಕೊಟ್ಟ ನಂತರ ನನಗೆ ಯಾವುದೇ ಹಣ ಪಾವತಿ ಆಗಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಆರ್ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**